ಯಾವ ಶಾಲೆಯೂ ಇಲ್ಲ. ಗ್ರಾಮದ ಮಕ್ಕಳು ಓದಲು ಒಂದು ಪ್ರಾಥಮಿಕ ಶಾಲೆಯೂ ಇಲ್ಲ, ರಸ್ತೆಯೂ ಇಲ್ಲ. ಎಲ್ಲಿಯಾದರೂ ದೂರದ ಪ್ರಯಾಣ ಮಾಡಬೇಕಾದರೆ ನಾವು ಬಸ್ಸು ಹಿಡಿಯಲು ೧೫ ಅಥವಾ ೧೬ ಮೈಲಿ ದೂರ ನಡೆಯಬೇಕು. ನಾನು ಕೊಲ್ಕತಾದಲ್ಲಿ ಕೆಲಸ ಮಾಡಿದರೆ ನಾನು ಮಾತ್ರ ಸುಖವಾಗಿ ಇರಬಹುದು. ಆದರೆ ನನ್ನ ಗ್ರಾಮದ ಸೋದರ ಸೋದರಿಯರು ಅದೇ ಅಂಧಕಾರದಲ್ಲಿಯೇ ಇರಬೇಕಾಗುತ್ತದೆ. ಅವರ ದಾರಿದ್ರ್ಯ, ಅಜ್ಞಾನಗಳನ್ನು ನೆನೆದು ನನ್ನ ಹೃದಯ ದುಃಖದಿಂದ ತುಂಬಿದೆ. ಅವರಿಗಾಗಿ ನಾನು ಮರುಗುತ್ತಿರುತ್ತೇನೆ. ಪೂಜ್ಯ ಸ್ವಾಮಿಜಿಯವರ ಬಳಿಯಿದ್ದು ನಾನು ಶಿಕ್ಷಣವೆಂದರೆ ಏನು ಎಂದು ಅರಿತಿದ್ದೇನೆ. ಸರ್, ನೀವು ನನಗಾಗಿ ನಮ್ಮ ಗ್ರಾಮದಲ್ಲಿ ಒಂದು ಶಾಲೆಯನ್ನು ತೆರೆಯಬಲ್ಲಿರ?" ಎಂದ.

ಬಾಲಕನ ಈ ಮಾತುಗಳನ್ನು ಕೇಳಿ ಪೂಜ್ಯ ಸ್ವಾಮಿ ಲೋಕೇಶ್ವರಾನಂದಜಿ ಅವರ ಮುಖ ಉಜ್ವಲವಾಗಿ ಬೆಳಗಿತು. ಡಾ. ಸೇನರಿಗೆ ಇದೊಂದು ಹೊಸ ಅನುಭವ! ಇಂತಹ ಮಾತನ್ನು ಈ ಹಿಂದೆ ಅವರು ಕೇಳಿರಲಿಲ್ಲ. ಅವರು ಈ ಪ್ರಸ್ತಾವಕ್ಕೆ ತಕ್ಷಣ ಸಮ್ಮತಿ ನೀಡಿದರು. ಕೆಲವೇ ದಿನಗಳಲ್ಲಿ ಆ ಬಾಲಕನ ಗ್ರಾಮದಲ್ಲಿ ಶಾಲೆ ಪ್ರಾರಂಭವಾಯಿತು. ಆ ಬಾಲಕನ ಪ್ರಯತ್ನದಿಂದಾಗಿ ಕೊಳವೆಬಾವಿಗಳು ಬಂದವು; ನೀರಿನ ವ್ಯವಸ್ಥೆ ಎಷ್ಟೋ ಸುಧಾರಿಸಿತು. ಆ ಹುಡುಗನ ದೀರ್ಘಕಾಲದ ಪರಿಶ್ರಮದಿಂದಾಗಿ ಆ ಗ್ರಾಮದ ಚಹರೆಯೇ ಪೂರ್ತಿ ಬದಲಾಯಿಸಿತು. ಆತನ ಬಳಿ ಆಗ ಮಾದರಿಯಾಗಿ ಇದ್ದದ್ದು, ರಾಮನಗರ ಬಸ್ತಿ. ಆತ ಅಲ್ಲಿ ಅನೇಕ ದಿನ ಸೇವೆ ಸಲ್ಲಿಸಿದ. ಆತನಿಗೆ ಉತ್ಸಾಹ ಹಾಗೂ ಪ್ರೇರಣೆ ನೀಡಲು ಸ್ವಾಮಿ ಲೋಕೇಶ್ವರಾನಂದಜಿ ಮಹಾರಾಜರು ಎರಡು ಮೂರು ಬಾರಿ ಅಲ್ಲಿಗೆ ಹೋಗಿದ್ದರು. ಆ ಬಾಲಕನ ಗ್ರಾಮವು ಈ ದಿನ ನರೇಂದ್ರಪುರದ ಲೋಕಶಿಕ್ಷಾ ಪರಿಷದ್ ಸಂಚಾಲಿತ ಗ್ರಾಮಸೇವೆ ಹಾಗೂ ಗ್ರಾಮೋನ್ನತಿಯ ಕೆಲಸಕ್ಕೆ ಒಂದು ಆದರ್ಶ ಉದಾಹರಣೆ ಆಗಿದೆ.

## ಪ್ರಹಸನ ಪ್ರಸಂಗ

ಮನೆಗೆ ಕಳ್ಳ ನುಗ್ಗಿ ಬಂದಿರುವುದನ್ನು ಏಳು ವರ್ಷದ ಬಾಲಕ ನೋಡಿಬಿಟ್ಟ. ಮನೆಯ ಎಲ್ಲ ಬೆಲೆಬಾಳುವ ವಸ್ತುಗಳನ್ನು ಕಳ್ಳ ಸದ್ದಿಲ್ಲದೆ ಗಂಟುಕಟ್ಟಲು ಪ್ರಾರಂಭಿಸಿದ. ಬಾಲಕ ಎದ್ದುಬಂದು ಕಳ್ಳನಿಗೆ ಬೆದರಿಕೆ ಹಾಕಿದ, "ನೋಡು, ನನ್ನ ಶಾಲೆಯ ಚೀಲವನ್ನೂ ತೆಗೆದುಕೋ. ಇಲ್ಲದಿದ್ದರೆ ಈಗಲೇ ಅಪ್ಪ ಅಮ್ಮನನ್ನು ಕೂಗಿ ಎಬ್ಬಿಸುವೆ!"

* * * *

**ಸಂದರ್ಶಕ** : ನೀವು ವಿವಾಹಿತ ಪುರುಷರಿಗೆ ಹೆಚ್ಚಾಗಿ ಕೆಲಸ ಕೊಡುವುದನ್ನು ಗಮನಿಸಿರುವೆ. ಏಕೆ ಹೀಗೆ?

**ಮಾಲೀಕ** : ಏಕೆಂದರೆ, ಅವರು ಮನೆಗಿಂತ ಆಫೀಸಿನಲ್ಲಿ ಹೆಚ್ಚು ಹೊತ್ತು ಇರಲು ಬಯಸುತ್ತಾರೆ!

* * * *

ಒಬ್ಬ ಹುಚ್ಚ ಮತ್ತೊಬ್ಬನನ್ನು ಪ್ರಶ್ನಿಸಿದ, "ನಾನು ಎವರೆಸ್ಟ್ ಪರ್ವತವನ್ನು ಹತ್ತಿಬಿಟ್ಟರೆ ನೀನು ನನಗೆ ಏನು ಕೊಡುವೆ?" ಆ ಹುಚ್ಚ ಕೂಡಲೇ ಹೇಳಿದ, "ಒಮ್ಮೆ ತಳ್ಳಿಬಿಡುವೆ!"

* * * *

**ಗುಂಡ:** ನಿನಗೆ ಈಜಲು ಬರುವುದೇ?

**ಗಾಂಪ:** ಇಲ್ಲ.

**ಗುಂಡ:** ಅಯ್ಯೋ! ನಿನಗಿಂತ ಈಜು ಬರುವ ನಾಯಿಯೇ ಮೇಲು.

**ಗಾಂಪ:** ನಿನಗೆ ಈಜು ಬರುತ್ತದೆಯೇ?

**ಗುಂಡ:** ಅರೆ! ಹ್ಞೂ!

**ಗಾಂಪ:** ಹಾಗಾದರೆ ನಿನಗೂ ನಾಯಿಗೂ ಏನಯ್ಯಾ ವ್ಯತ್ಯಾಸ?

* * * *

**ಗುರು:** ಇನ್ನು ನೀವು ಕಣ್ಣನ್ನು ಮುಚ್ಚಿ ಧ್ಯಾನ ಮಾಡುವ ಆವಶ್ಯಕತೆಯಿಲ್ಲ. ಕಣ್ಣನ್ನು ತೆರೆದಿಟ್ಟುಕೊಂಡೇ ಧ್ಯಾನಿಸಿ.

ಈ ಮಾತನ್ನು ಕೇಳಿಸಿಕೊಂಡ ಗುಂಡನಿಗೆ ಅಚ್ಚರಿಯಾಯಿತು. ಗುರುಗಳ ಮುಂದಿನ ಮಾತುಗಳನ್ನು ಕಿವಿಗೊಟ್ಟು ಕೇಳಲಾರಂಭಿಸಿದ.

**ಗುರು:** ನಿಮ್ಮ ಕಣ್ಣನ್ನು ತೆರೆದಿಟ್ಟುಕೊಂಡು ದೀಪದ ಜ್ವಾಲೆಯ ಮೇಲೋ ಅಥವಾ ಇನ್ಯಾವುದಾದರೂ ವಸ್ತುವಿನ ಮೇಲೋ ಮನಸ್ಸನ್ನು ಕೇಂದ್ರೀಕರಿಸಬಹುದು.

**ಗುಂಡ:** ಟಿ.ವಿ.ಯ ಮೇಲಾದರೆ ಆಗಬಹುದೇ!